







ಕರೆಯುತ್ತಾರೆ. ಸಣಕಲು ದೇಹದವರಾಗಲೀ, ದಢೂತಿಗಳಾಗಲಿ ಅಂಗಿಯು ಅವರ ದೇಹದ ಮೇಲೆ ದೊಡ್ಡ ಕೊಳವೆಯಂತೆ ಇರುತ್ತಿತ್ತು. ಅದು ಆ ಕಾಲದ ಟ್ರೆಂಡ್. ಆಮೇಲೆ ಅದರಲ್ಲೇ ಕೊಂಚ ಮಾರ್ಪಾಟುಗಳಾಗುತ್ತಾ ಬಂತು. ಜಿಮ್ ಸಂಸ್ಕೃತಿ ಕೂಡ ದೇಹಾಕಾರದ ಮೋಹವನ್ನು ಹೆಚ್ಚಿಸಿತು. ತಮ್ಮ ದೇಹದ ಸ್ನಾಯುಗಳನ್ನು ಕಟೆದ ರೀತಿಯಲ್ಲೇ ಬಿಂಬಿಸುವುದು ಕೂಡ ಫ್ಯಾಷನ್ ಸ್ಟೇಟ್‌ಮೆಂಟ್ ಆಯಿತು. ಅದಕ್ಕೇ ಸ್ಲಿಮ್ ಫಿಟ್ ಶರ್ಟ್‌ಗಳಿಗೆ ಮಾರುಕಟ್ಟೆಯಲ್ಲಿ 2011ರ ಹೊತ್ತಿಗೇ ಶೇ. 50ರಷ್ಟು ಬೇಡಿಕೆ ಸೃಷ್ಟಿಯಾಯಿತು. ಅಮೆರಿಕದ್ದೇ 'ಎಂಆರ್ ಮ್ಯಾಗಜಿನ್' ಎಂಬ ಪುರುಷರ ಫ್ಯಾಷನ್ ನಿಯತಕಾಲಿಕೆಯೊಂದಿದೆ. ಅದರ ಸಂಪಾದಕ ಕರೆನ್ ಆಲ್ಬರ್ಗ್ ಗ್ರಾಸ್‌ಮನ್ ಅವರು ಸ್ಲಿಮ್ ಫಿಟ್ ಟ್ರೆಂಡ್‌ನ ಬಗೆಗೆ ಸವಿಸ್ತಾರವಾಗಿ ಬರೆದಿದ್ದರು. ಬ್ಯುಸಿನೆಸ್ ಸೂಟ್‌ಗಳ ಒಳಭಾಗದಲ್ಲಿ ಧರಿಸುವ ಅಂಗಿಗಳು ಮೊದಲು ಸ್ಲಿಮ್ ಫಿಟ್ ಆಗತೊಡಗಿದ್ದನ್ನು, ಆಮೇಲೆ ಅಂತಹ ವಿನ್ಯಾಸದ ಅಂಗಿಗಳೇ ಮಾರುಕಟ್ಟೆಯಲ್ಲಿ ಜನಪ್ರಿಯವಾದದ್ದನ್ನು ಅವರು ಬಿಡಿಸಿ ಹೇಳಿದ್ದರು.

ಒಂದೊಂದು ಬ್ರಾಂಡ್‌ನ ಸ್ಲಿಮ್ ಫಿಟ್ ಅಂಗಿ ಕೂಡ ಇವತ್ತು ಭಿನ್ನವಾಗಿರುತ್ತದೆ. ಕೆಲವು ಬ್ರಾಂಡ್‌ಗಳು ಸ್ಟ್ರಾ ಅನ್ನು ಪೇಪರ್‌ನಿಂದ ಸುತ್ತಿಟ್ಟರೆ ಹೇಗೆ ಕಾಣುವುದೋ, ಅದೇ ರೀತಿ ದೇಹದ ಮೇಲ್ಭಾಗದ ಅಷ್ಟೂ ಅಂಗಗಳಿಗೆ ಮೆತ್ತಿಕೊಳ್ಳುವಷ್ಟು ಸ್ಲಿಮ್ ಆದ ಅಂಗಿಗಳನ್ನು ತಯಾರು ಮಾಡುತ್ತವೆ. ಅವನ್ನು ಹಾಕಿಕೊಂಡು ಕನ್ನಡಿ ಮುಂದೆ ನಿಂತಾಗ, ಗುಂಡಿಗಳು ಕಿತ್ತು ಸಿಡಿದರೆ ಏನು ಗತಿ ಎಂದು ಅನ್ನಿಸಿದರೂ ಅಚ್ಚರಿಯಿಲ್ಲ. ಆದರೆ, ಬ್ರಾಂಡ್‌ಗಳ ವಿನ್ಯಾಸಕಾರರು ಜಾಣರು. ಹಾಗೆಲ್ಲ ಗುಂಡಿಯೇನೂ ಎಗರಿ, ಕಿತ್ತು ಬರುವುದಿಲ್ಲ ಎಂದು ಅವರೇ ಸಮಾಧಾನ ಮಾಡುತ್ತಾರೆ. ಈಗ ಅಂಗಿಗಳನ್ನು ತಯಾರಿಸಲು ಬಳಸುವ ನೂಲುಗಳು ಎಲ್ಯಾಸ್ಟಿಕ್‌ನಂತೆ ವಿಕಸನಗೊಳ್ಳುವ ಬಗೆಯದ್ದಾಗಿರುತ್ತವೆ. ದೇಹಾಕಾರಕ್ಕೆ ತಕ್ಕಂತೆ ಅವು ಹಿಗ್ಗಬಲ್ಲವು. ಹೀಗಾಗಿ ಒಮ್ಮೆ ಧರಿಸಿದರೆ, ಧರಿಸುವವರ ದೇಹಾಕಾರವನ್ನು ಆ ನೂಲುಗಳೇ ಅರ್ಥ ಮಾಡಿಕೊಳ್ಳುತ್ತವೆ ಎನ್ನುವುದು ಕರೆನ್ ಆಲ್ಬರ್ಗ್ ನೀಡಿದ್ದ ವಿವರಣೆ.

ಸ್ಲಿಮ್ ಫಿಟ್ ಎನ್ನುವುದು ಕಣ್ಣು ಮಿಟುಕಿಸುವಷ್ಟರಲ್ಲಿ ಭಾರತದ ಮಾರುಕಟ್ಟೆಯನ್ನೂ ಆವರಿಸಿಕೊಂಡಿತು. ಇವತ್ತು ಕ್ರಿಕೆಟರ್‌ಗಳು ನೆಟ್ಸ್‌ನಲ್ಲಿ ಅಭ್ಯಾಸ ಮಾಡುವಾಗ ತೊಡುವ ಬಟ್ಟೆಗಳೂ ಸ್ಲಿಮ್ ಫಿಟ್ ಆಗಿರುತ್ತವೆ; ಈಜುಕೊಳದಲ್ಲಿ ಅಭ್ಯಾಸ ಮಾಡುವವರು ತೊಡುತ್ತಾರಲ್ಲ ಹಾಗೆ. ಮಾರ್ಕೆಟಿಂಗ್ ಎಕ್ಸಿಕ್ಯುಟಿವ್‌ಗಳು ಕೂಡ ವೃತ್ತಿಪರತೆಯ 'ಸ್ಟೈಲ್ ಸ್ಟೇಟ್‌ಮೆಂಟ್' ಎಂದು ಸ್ಲಿಮ್ ಫಿಟ್ ಧರಿಸುತ್ತಾರೆ.



ಇದಕ್ಕೆ ಇರುವ ಕಚೇರಿ ಉಡುಗೆ ಎಂಬ ಭಾವನೆಯನ್ನು ವಿರೋಧಿಸಿಯೇ ಕೆಲವು ರ‍್ಯಾಪರ್‌ಗಳು ದೊಗಳೆ ಟಿಶರ್ಟ್‌ಗಳನ್ನು ಹಾಕತೊಡಗಿದ್ದು. ಹೆಣ್ಣುಮಕ್ಕಳ ಉಡುಪಿನ ಲೋಕಕ್ಕೂ ಇಂತಹ ಸ್ಲಿಮ್ ಫಿಟ್‌ಗಳು ಪ್ರವೇಶಿಸಿದವು.

ದಪ್ಪಗೆ ಇರುವವರು ಸಹ ಕೊಂಚ ಸಣ್ಣಗೆ ಕಾಣುವಂತೆ ಇಂತಹ ಉಡುಗೆಗಳು ಮಾಡಬಲ್ಲವು. ಆದರೆ, ಸುದೀರ್ಘಾವಧಿ ಸ್ಲಿಮ್ ಫಿಟ್ ಬಟ್ಟೆಗಳನ್ನು ತೊಡುವುದು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ವೈದ್ಯರು ಎಚ್ಚರಿಸುತ್ತಾರೆ. ಮೈಗಂಟಿಕೊಳ್ಳುವ ಬಟ್ಟೆಗಳು ರಕ್ತನಾಳಗಳಲ್ಲಿ ಸಲೀಸಾಗಿ ರಕ್ತಸಂಚಾರ ಆಗದಂತೆ ತಡೆಯುವ ಅಪಾಯವಿದೆ ಎನ್ನುತ್ತಾರೆ. ಇದಕ್ಕೂ ಪ್ರತಿಕ್ರಿಯಾತ್ಮಕವಾಗಿ ತಮ್ಮ ಅಂಗಿಯ ನೂಲುಗಳು ಎಷ್ಟು ನಾಜೂಕು ಹಾಗೂ ಎಲ್ಯಾಸ್ಟಿಸಿಟಿ ಉಳ್ಳದ್ದೆಂದರೆ, ರಕ್ತನಾಳಗಳನ್ನು ಅದುಮಿ ಹಿಡಿಯುವುದಿಲ್ಲ ಎಂದು ಮಾರ್ಕೆಟಿಂಗ್ ಮಾಡುವ ಬ್ರಾಂಡ್‌ನವರೂ ಇದ್ದಾರೆ.

'ಸಿಂಗಂ'ಗಳು, 'ಬಾಡಿಗಾರ್ಡ್'ಗಳು, 'ಕೆಜಿಎಫ್ ರಾಕಿ'ಗಳು, 'ಟೈಗರ್ ಶ್ರಾಫ್ ತುಂಡುಗಳ'ನ್ನೆಲ್ಲ ನೋಡಿದ ಯುವ ಪ್ರೇಕ್ಷಕರು ತಾವೂ ಜಿಮ್‌ಗಳಿಗೆ ಎಡತಾಕಿ, ಸ್ಲಿಮ್ ಫಿಟ್ ಮಳಿಗೆಯ ಮೆಟ್ಟಿಲು ಹತ್ತಿದವರೆ? 'ಮೈಗಂಟಿದ ಬಟ್ಟೆ, ಕಾಣದು ಹೊಟ್ಟೆ' ಎನ್ನುವುದು ಈ ಕಾಲದ ಫ್ಯಾಷನ್ ಮಂತ್ರ.